# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 861
ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 24.07.2024

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಸಾರಿಗೆ ಇಲಾಖೆ ವತಿಯಿಂದ 2023-24ನೇ ಸಾಲಿನಲ್ಲಿ "ನಮ್ಮ ಕಾರ್ಗೋ ಟ್ರಕ್" ಸೇವೆಯನ್ನು ಪರಿಚಯಿಸಲಾಗಿದ್ದು, ಇದರ ಸೇವೆಯನ್ನು ಎಷ್ಟು ಜನರು/ವ್ಯಾಪಾರಸ್ಥರು ಉಪಯೋಗ ಪಡೆದುಕೊಂಡಿದ್ದಾರೆ: (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ದಿನಾಂಕ:23.12.2023 ರಿಂದ "ನಮ್ಮ ಕಾರ್ಗೋ" ಟ್ರಕ್‌ಗಳನ್ನು ನಿಗಮದ ಆಂತರಿಕ ಬಳಕೆ ಮತ್ತು ಸಾರ್ವಜನಿಕ ಬಳಕೆಯ ರೀತಿಯಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿರುತ್ತದೆ. ನಿಗಮದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿನ ಟ್ರಕ್ ಕಾರ್ಯಾಚರಣೆಯಿಂದ 49 ಜನರು/ವ್ಯಾಪಾರಸ್ಥರು ಉಪಯೋಗ ಪಡೆದುಕೊಂಡಿದ್ದಾರೆ.<br><br>ಜಿಲ್ಲಾವಾರು ಮಾಹಿತಿಯನ್ನು "ಅನುಬಂಧ" ದಲ್ಲಿ ನೀಡಲಾಗಿದೆ.</td></tr>
<tr><td>ಆ.</td><td>ಈ ಸೇವೆಯಿಂದ ರಾಜ್ಯ ಕೆ.ಎಸ್.ಆರ್.ಟಿ.ಸಿ. ಸಂಸ್ಥೆ ಎಷ್ಟು ಲಾಭ ಪಡೆದಿದೆ ಮತ್ತು ನಿರೀಕ್ಷಿತ ಲಾಭಾಂಶವನ್ನು ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯು ಪಡೆದಿದೆಯೇ;</td><td>"ನಮ್ಮ ಕಾರ್ಗೋಟ್ರಕ್" ಟ್ರಕ್‌ಗಳ ಸೇವೆಯನ್ನು ಸಾರ್ವಜನಿಕರ ಬೇಡಿಕೆಗನುಗುಣವಾಗಿ ಒದಗಿಸಿ ಜೂನ್ - 2024 ರವರೆಗೆ ಒಟ್ಟು ರೂ.14,80,230/- ಗಳ ಆದಾಯ ಗಳಿಸಿರುತ್ತದೆ.</td></tr>
<tr><td>ಇ.</td><td>ಪ್ರಸ್ತುತ 2024-25ನೇ ಸಾಲಿನಲ್ಲಿ ಈ ಸೇವೆಯನ್ನು ಯಾವ-ಯಾವ ಪ್ರದೇಶಗಳಲ್ಲಿ ವಿಸ್ತರಿಸಲಾಗುವುದು; (ಮಾಹಿತಿ ನೀಡುವುದು)</td><td>ನಿಗಮದ ವ್ಯಾಪ್ತಿಯಲ್ಲಿ ಬರುವ 14 ಜಿಲ್ಲೆಗಳಲ್ಲಿ ಈಗಾಗಲೇ ಪ್ರಾರಂಭಿಸಲಾಗಿದೆ.<br><br>ಮುಂದಿನ ದಿನಗಳಲ್ಲಿ ಸರ್ಕಾರಿ ಸ್ವಾಮ್ಯದ/ ಅರೆ ಸರ್ಕಾರಿ/ ನಿಗಮಗಳ/ ಸಾರ್ವಜನಿಕರ/ ಗ್ರಾಹಕರ ಬೇಡಿಕೆ ಅನುಗುಣವಾಗಿ ಸೇವೆಯನ್ನು ವಿಸ್ತರಿಸುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲು ಯೋಜಿಸಲಾಗಿದೆ.</td></tr>
<tr><td>ಈ.</td><td>ಕೆ.ಎಸ್.ಆರ್.ಟಿ.ಸಿ./ಕೆ.ಕೆ.ಆರ್.ಟಿ.ಸಿ/ಬಿ.ಎಂ.ಟಿ.ಸಿ ನಿಗಮಗಳಿಗೆ ಸೇರಿರುವ ಒಟ್ಟು ಆಸ್ತಿ ಎಷ್ಟು; (ನಿಗಮವಾರು ವಿವರ ನೀಡುವುದು)</td><td>ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಿಗೆ ಸೇರಿರುವ ಒಟ್ಟು ಆಸ್ತಿಗಳ ಮಾಹಿತಿ ಕೆಳಕಂಡಂತಿದೆ:-<br><table><tr><th>ನಿಗಮ</th><th>ಆಸ್ತಿ ವಿವರ</th></tr><tr><td>ಕ.ರಾ.ರ.ಸಾ.ನಿಗಮ</td><td>1184 ಎಕರೆ 5 ಗುಂಟೆ.</td></tr><tr><td>ಬೆಂ.ಮ.ಸಾ.ಸಂಸ್ಥೆ</td><td>1062.14 ಎ/ಗು ಜಮೀನು/ಸ್ವತ್ತುಗಳು</td></tr></table></td></tr>
</table>

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ವಾ.ಕ.ರ.ಸಾ.ಸಂಸ್ಥೆ — 652 ಎಕರೆ 02 ಗುಂಟೆ ನಿವೇಶನ<br>ಕ.ಕ.ರ.ಸಾ.ನಿಗಮ — 715 ಎಕರೆ |
| ಉ. | ಈ ಆಸ್ತಿಗಳನ್ನು ಸಂಸ್ಥೆಗಳು ತನ್ನ ಕಾರ್ಯ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಬಳಿಸಿಕೊಳ್ಳುತ್ತಿದೆಯೇ; | **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**:-<br><br>ನಿಗಮದ ಬಸ್ ನಿಲ್ದಾಣ/ಬಸ್ ಘಟಕ, ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣಕ್ಕಾಗಿ ಕಾಯ್ದಿರಿಸಿರುವ ಆಸ್ತಿಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಆಸ್ತಿಗಳನ್ನು ತನ್ನ ಕಾರ್ಯ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಬಳಿಸಿಕೊಳ್ಳುತ್ತಿದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**:-<br><br>ಸಂಸ್ಥೆಯು ನಿರ್ಮಿಸಿರುವ ಬಸ್ ನಿಲ್ದಾಣ/ಬಸ್ ಘಟಕಗಳನ್ನು ಹೊರತುಪಡಿಸಿ, ಉಳಿದಂತೆ ಖಾಲಿ ಇರುವ 678-26 ಎ/ಗು ಜಮೀನುಗಳಲ್ಲಿ ಅನುಗುಣವಾಗಿ ನೂತನ ಘಟಕ, ನೂತನ ಬಸ್ ನಿಲ್ದಾಣ ಅಥವಾ ವಸತಿಗೃಹಗಳ ನಿರ್ಮಾಣ ಕಾರ್ಯವನ್ನು ಮುಂದಿನ ದಿನಗಳಲ್ಲಿ ಕೈಗೊಳ್ಳಲು ಅವಶ್ಯಕತೆ ಮತ್ತು ಆರ್ಥಿಕ ಲಭ್ಯತೆಗನುಗುಣವಾಗಿ ಪರಿಶೀಲಿಸಲಾಗುವುದು.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br><br>ಆಸ್ತಿಗಳನ್ನು ನಿಗಮದ ಕಾರ್ಯ ಚಟುವಟಿಕೆಗಳಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. |
| ಊ. | ಈ ಆಸ್ತಿಗಳಿಂದ ಹೆಚ್ಚಿನ ವರಮಾನವನ್ನು ಪಡೆದುಕೊಳ್ಳಲು (Property Monetization) ಕ್ರಮ ಕೈಗೊಳ್ಳಲಾಗಿದೆಯೇ? | **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**:-<br>ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳು, ಸ್ಥಳಗಳಿಗೆ ನಿಗಮದ ನಿಯಮಾವಳಿಗಳನ್ವಯ ಟೆಂಡರ್ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಮೂಲಕ ಮಾಸಿಕ ಪರವಾನಗಿ ಶುಲ್ಕ ಪಾವತಿ ಆಧಾರದ ಮೇಲೆ ಪರವಾನಗಿದಾರರನ್ನು ಆಯ್ಕೆ ಮಾಡುವ ಮೂಲಕ ಆದಾಯ ಪಡೆದುಕೊಳ್ಳಲು ಕ್ರಮ ವಹಿಸಲಾಗುತ್ತಿದೆ.<br><br>ಮುಂದುವರೆದು, ನಿಗಮದ ವಿಭಾಗಗಳ ವ್ಯಾಪ್ತಿಯಲ್ಲಿನ ಖಾಲಿ ನಿವೇಶನಗಳಲ್ಲಿ ಪೆಟ್ರೋಲಿಯಂ ಔಟ್‌ಲೆಟ್‌ಗಳನ್ನು ತೆರೆಯುವ ಸಂಬಂಧ ಟೆಂಡರ್ ಮೂಲಕ ಸರ್ಕಾರಿ ಸೌಮ್ಯದ ತೈಲ ಕಂಪನಿಗಳನ್ನು ಆಯ್ಕೆ ಮಾಡಿದ್ದು, ಈ ಸಂಬಂಧ ಮುಂದಿನ ಕ್ರಮ ಚಾಲ್ತಿಯಲ್ಲಿರುತ್ತದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**:-<br><br>ಸಂಸ್ಥೆಗೆ ಹಂಚಿಕೆ ಮಾಡಿರುವ ಜಮೀನುಗಳಲ್ಲಿ ಹಲವು ಸ್ವತ್ತುಗಳಲ್ಲಿ ಕಟ್ಟಡಗಳನ್ನು ನಿರ್ಮಿಸಿ ಈಗಾಗಲೇ ವಾಣಿಜ್ಯ ಉದ್ದೇಶಕ್ಕೆ, Fuel outletsಗಳಿಗೆ ನೀಡಲಾಗಿರುತ್ತದೆ. ಖಾಲಿ ಇರುವ ಕೆಲವು ಜಮೀನುಗಳನ್ನು ಮೂಲ ಉದ್ದೇಶದೊಂದಿಗೆ, Fuel outlets, Electric Vehicle Charging Stations ಮತ್ತು ಇತರೆ ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಳ್ಳಲು ಅಗತ್ಯ ಭೂ ಉಪಯೋಗ ಬದಲಾವಣೆ ಕುರಿತಾದ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**<br><br>ಹುಬ್ಬಳ್ಳಿ ಗೋಕುಲ ರಸ್ತೆಯಲ್ಲಿರುವ ಹಳೇ ಗೆಸ್ಟ ಹೌಸ್ 01 ಎಕರೆ 08 ಗುಂಟೆ ಹಾಗೂ ಸಿಬ್ಬಂದಿಯ ಹಳೆ ವಸತಿಗೃಹಗಳ ನಿವೇಶನ 05 ಎಕರೆ 11 ಗುಂಟೆ 38 ಆಣೆ ವಿಸ್ತೀರ್ಣದ ನಿವೇಶನಗಳಲ್ಲಿ ಪಿ.ಪಿ.ಪಿ. ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:-** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ನಿಗಮದ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳಲ್ಲಿ ಒಟ್ಟು 818 ಕಟ್ಟಿದ ಮಳಿಗೆಗಳು ಹಾಗೂ 453 ತೆರೆದ ಸ್ಥಳಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ನಿಗಮದ ನಿಯಮಾವಳಿಗಳ ಪ್ರಕಾರ ಟೆಂಡರ್ ಮೂಲಕ ಪರವಾನಿಗೆ ಮೇಲೆ ನೀಡಲಾಗಿರುತ್ತದೆ. ನಿಗಮದ ಬಸ್ ನಿಲ್ದಾಣಗಳ ವಾಣಿಜ್ಯ ಮಳಿಗೆಗಳಿಂದ, ಜಾಹೀರಾತು, ಬಸ್ ನಿಲ್ದಾಣಗಳ ಸ್ವಚ್ಛತಾ ಗುತ್ತಿಗೆ ಮುಂತಾದ ವಾಣಿಜ್ಯ ಚಟುವಟಿಕೆಗಳಿಂದ ಆದಾಯ ಗಳಿಕೆಯಾಗುತ್ತಿದೆ.<br><br>ಅಲ್ಲದೆ, ನಿಗಮದ ಆಸ್ತಿಗಳಿಂದ ಹೆಚ್ಚಿನ ವರಮಾನ ಪಡೆಯಲು ಖಾಸಗಿಯವರಿಗೆ ವಾಣಿಜ್ಯ ಮಳಿಗೆಗಳನ್ನು ಹಾಗೂ ಇಂಧನ ಪಂಪಗಳನ್ನು ಅಳವಡಿಸುವುದಕ್ಕೆ ಬಾಡಿಗೆ ಆಧಾರದ ಮೇಲೆ ಎಚ್.ಪಿ.ಸಿ.ಎಲ್. ರವರಿಗೆ ವಹಿಸಿಕೊಡಲಾಗುತ್ತಿದೆ. |

ಸಂಖ್ಯೆ: ಟಿಡಿ 142 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

"ಅನುಬಂಧ-ಅ"

ಕ.ರಾ.ರ.ಸಾ ನಿಗಮ : : ಕೇಂದ್ರ ಕಛೇರಿ : : ಬೆಂಗಳೂರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಎಲ್.ಸಿ.ಕ್ಯೂ :861

**ದಿನಾಂಕ 24 .12.2023 ರಿಂದ ಜೂನ್-2024 ಮಾಹೆಯ ವರೆಗೆ**

| ಕ್ರ.ಸಂ | ಜಿಲ್ಲೆ | ಜನರು/ವ್ಯಾಪಾರಸ್ಥರು |
|---|---|---|
| 1 | ಬೆಂಗಳೂರು ಜಿಲ್ಲೆ. | 4 |
| 2 | ರಾಮನಗರ ಜಿಲ್ಲೆ. | 3 |
| 3 | ತುಮಕೂರು ಜಿಲ್ಲೆ. | 4 |
| 4 | ಚಿಕ್ಕಬಳ್ಳಾಪುರ ಜಿಲ್ಲೆ. | 3 |
| 5 | ಕೋಲಾರ ಜಿಲ್ಲೆ. | 5 |
| 6 | ಮೈಸೂರು ಜಿಲ್ಲೆ. | 3 |
| 7 | ಚಾಮರಾಜನಗರ ಜಿಲ್ಲೆ. | 4 |
| 8 | ಹಾಸನ ಜಿಲ್ಲೆ. | 6 |
| 9 | ಮಂಡ್ಯ ಜಿಲ್ಲೆ. | 3 |
| 10 | ಚಿಕ್ಕಮಗಳೂರು ಜಿಲ್ಲೆ. | 2 |
| 11 | ಮಂಗಳೂರು ಜಿಲ್ಲೆ. | 4 |
| 12 | ದಾವಣಗೆರೆ.ಜಿಲ್ಲೆ. | 4 |
| 13 | ಶಿವಮೊಗ್ಗ ಜಿಲ್ಲೆ. | 3 |
| 14 | ಚಿತ್ರದುರ್ಗ ಜಿಲ್ಲೆ. | 1 |
| | ಒಟ್ಟು | 49 |

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)